ಪಬ್ಲಿಕ್ ಪರೀಕ್ಷೆ ಆಗಿರಂವ್ತದಿಲ್ಲ. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಈ ಪರೀಕ್ಷೆಯನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಉಪನಿರ್ದೇಶಕರ ಕಾರ್ಯಾಲಯದಲ್ಲಿರುವ ಒಬ್ಬ ವಿಷಯ ಪರಿವೀಕ್ಷಕರು (ಸಬ್ಜೆಕ್ಟ್ ಇನ್‌ಸ್ಪೆಕ್ಟರ್) ಜಿಲ್ಲಾ ಮಟ್ಟದ ಒನೇ ತರಗತಿಯ ಪರೀಕ್ಷೆಯ ಕಾರ್ಯದರ್ಶಿಯಾಗಿರುತ್ತಾರೆ

ಧಾರವಾಡ ಜಿಲ್ಲೆಯ ಒನೇ ತರಗತಿಯ ಪರೀಕ್ಷೆಯನ್ನು ದಿನಾಂಕ ೧೯-೩-೯೦ ರಿಂದ ೨೪-೩-೯೦ರ ವರೆಗೆ ನಡೆಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಪ್ರಕಾರ ವಿಜ್ಞಾನ ಪರೀಕ್ಷೆ ೨೨-೩-೧೯೯೦ರಂದು ಮತ್ತು ಸಮಾಜ ಶಾಸ್ತ್ರದ ಪರೀಕ್ಷೆ ೨೩-೩-೯೦ ರಂದು ನಡೆಯಬೇಕಿತ್ತು. ದಿನಾಂಕ ೨೧-೩-೯೦ರಂದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಪ್ರತಿನಿಧಿಗಳು ೨೨ ಮತ್ತು ೨೩ನೇ ಮಾರ್ಚ್‌ಯಂದು ನಡೆಯಬೇಕಿದ್ದ ಪರೀಕ್ಷೆಯನ್ನು ಕೆಲವು ಪುಶ್ನೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ತಂದುಕೊಟ್ಟರು. ಉಪನಿರ್ದೇಶಕರು ಅವುಗಳನ್ನು ಮೂಲ ಪ್ರಶ್ನೆ ಪತ್ರಿಕೆಗಳೊಡನೆ ಹೋಲಿಸಿ ಬಹಿರಂಗವಾಗಿರುವುದನ್ನು ಖಚಿತಪಡಿಸಿಕೊಂಡು ದಿನಾಂಕ ೨೨-೩-೯೦ ಮತ್ತು ೨೩-೩-೯೦ರಂದು ನಡೆಯಬೇಕಿದ್ದ ಪರೀಕ್ಷೆಗಳನ್ನು ರದ್ದುಪಡಿಸಿ, ಈ ವಿಷಯಗಳ ಪರೀಕ್ಷೆಯನ್ನು ೨೯ ಮತ್ತು ೩೦ನೇ ಮಾರ್ಚ್‌ಯಂದು ನಡೆಸುವ ವಿಪರ್ಯಾಸ ಮಾಡಿದ್ದಾರೆ. ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೂ ಸಹ ಈ ವಿಷಯ ತಿಳಿಸಲಾಗಿದೆ. ಅವರು ಹುಬ್ಬಳ್ಳಿ, ನಗರದಲ್ಲಿ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗಿರುವುದರಿಂದ ಹುಬ್ಬಳ್ಳಿ ಸಿಟಿ ರೇಂಜಿನಲ್ಲಿ ಕೆಲಸ ಮಾಡುತ್ತಿರುವ ಪದವೀಧರ ತ್ರಿಪಾಸಣಾಧಿಕಾರಿಗಳಾದ ಶ್ರೀ ಮುಳ್ಳಳ್ಳಿ, ಶ್ರೀ ಬುಡವಡ್ಡರ್ ಮತ್ತು ಶ್ರೀ ಹಾವನೂರ್ ಇವರುಗಳನ್ನು ದಿನಾಂಕ ೨೬-೩-೯೦ರಿಂದ ಅಮಾನತ್ತಿನಲ್ಲಿ ಇಟ್ಟಿರುತ್ತಾರೆ.

ಪ್ರಾಥಮಿಕ ವಿಚಾರಣೆಯ ಆಧಾರದ ಮೇಲೆ ಸೂಚಿಸಿರುವ ಮೂರು ಜನ ತಪಾಸಣೆ ಅಧಿಕಾರಿಗಳು ಈ ಪ್ರಕರಣದಲ್ಲಿ ಕಾರಣರೆಂದು ತಿಳಿದು ಬಂದಿರುವುದರಿಂದ ಅವರನ್ನು ಅಮಾನತ್ತಿನಲ್ಲಿ ಇಟ್ಟಿರುತ್ತಾರೆ, ಮರುಪರೀಕ್ಷೆಯನ್ನು ಬಹಿಷ್ಕರಿಸುವ ಬಗ್ಗೆ ಯಾವ ಸೂಚನೆಗಳು ಬಂದಿಲ್ಲ, ಮತ್ತು ಈಗಿನ ೨೯-೩-೯೦ ರಿಂದ ಮರುಪರೀಕ್ಷೆ ನಡೆಯುತ್ತದೆ ಎಂದು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರು ತಿಳಿಸಿದ್ದಾರೆ.

೭. ಮೂಡಬಿದ್ರೆ ಪುರಸಭಾ ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿ ಸಬ್‌ಸ್ಟೇಷನ್ ತೆರೆಯಲು ಒತ್ತಾಯ

ಶ್ರೀ ಕೆ. ಸೋಮಪ್ಪ ಸುವರ್ಣ.—ನಮ್ಮ ಮೂಡಬಿದ್ರಿ ಪುರಸಭಾ ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿಯ ಬಹಳ ತೊಂದರೆಯಿದ್ದು ಒಂದು ಸಬ್ ಸ್ಟೇಷನ್ ತೆರೆಯಲು ವಿದ್ಯುಚ್ಛಕ್ತಿ ಮಂಡಳಿಯು ನಿರ್ಧರಿಸಿದ್ದು ಅದಕ್ಕೆ ಬೇಕಾದ ಸ್ಥಳವನ್ನು ಪಡೆದಿದ್ದು ಹಣದ ವ್ಯವಸ್ಥೆಯನ್ನು ಸಹ ಮಾಡಿತ್ತು. ೧೯೯೫-೯೦ರಲ್ಲೇ ಈ ಕೆಲಸವನ್ನು ಮಾಡಬೇಕೆಂದು ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಆದೇಶವನ್ನು ಇಶ್ಶಿದ್ದರು. ಇದರ ಕೆಲಸ ಎಷ್ಟು ಆಗಿದೆ? ಇದು ಯಾವಾಗ ಪೂರ್ತಿಗೊಳ್ಳುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಹಾಗೂ ವಿದ್ಯುತ್ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯ ಸಮೂಹದ ಪ್ರತ್ಯಿಗೆಯಲ್ಲಿ (ಹಾಲಡ್ಕ ಮಂಡಳ) ಒಂದು ೧X೧೦ ಎಂ. ವಿ. ಎ. ಸಾಮರ್ಥ್ಯದ ವಿದ್ಯುತ್ ಪರಿವರ್ತಕವಿರುವ ೧೧೦ ಕೆ. ವಿ. ಸಬ್‌ಸ್ಟೇಷನ್ನನ್ನು ನಿರ್ಮಾಣ ಮಾಡಲು ಯೋಜಿಸಲಾಗಿದೆ. ಈ ಸಬ್‌ಸ್ಟೇಷನ್ ಗ್ರಾಮೀಣ ವಿದ್ಯುದ್ದೀಕರಣ ನಿಗಮದವರ ಧನ ಸಹಾಯದಿಂದ ನಿರ್ಮಾಣ ಮಾಡಲಾಗುವುದು ಈ ಕಾರ್ಯಕ್ಕೆ ೧೯೯೯-೯೦ನೇ ಸಾಲಿನಲ್ಲಿ ೫೦.೦೦ಲಕ್ಷ ರೂಪಾಯಿಗಳನ್ನು ಮಂಡಳಿಯ ಆಯವ್ಯಯದಲ್ಲಿ ಒದಗಿಸಲಾಗಿತ್ತು. ಇದರ ಮೊದಲಿನ ಅಂದಾಜು ವೆಚ್ಚ ೫೫.೦೦ ಲಕ್ಷ ರೂಪಾಯಿಗಳಾಗಿತ್ತು. ಆದರೆ ಈ ಅಂದಾಜು ವೆಚ್ಚವನ್ನು ಇತ್ತೀಚೆಗೆ ೯೩.೦೦ ಲಕ್ಷ ರೂಪಾಯಿಗಳಿಗೆ ಪರಿಷ್ಕರಿಸಲಾಗಿದೆ. ಹೀಗಾಗಿ ಮೊದಲು ಒದಗಿಸಿರುವ ೫೦.೦೦ ಲಕ್ಷ ರೂಪಾಯಿಗಳು ಸಾಲದಾಗಿದೆ.

ಈ ಸಬ್ ಸ್ಟೇಷನ್ ನಿರ್ಮಾಣ ಮಾಡಲು ಬೇಕಾಗುವ ಭೂಮಿಯಲ್ಲಿ ೩.೦೦ ಎಕರೆ ಜಮೀನನ್ನು ಇತ್ತೀಚೆಗೆ ಸ್ವಾಧೀನಪಡಿಸಿಕೊಳ್ಳಲಾಯಿತು ಈ ಸ್ಟೇಷನ್ನಿಗೆ ಬೇಕಾಗುವ ೧೧೦ ಕೆ ವಿ. ಟ್ರಾನ್ಸ್‌ಮಿಷನ್ ಲೈನಿನ ಉದ್ದವು ಬಹಳ ಕಡಿಮೆ ಇದೆ. ಹೀಗಾಗಿ ಲೈನಿನ ಕೆಲಸಕ್ಕೆ ಬಹಳ ಸಮಯ ಬೇಕಾಗುವುದಿಲ್ಲ. ಸ್ಟೇಷನ್ನಿಗೆ ಬೇಕಾಗುವ ವಿದ್ಯುತ್ ಸಾಮಾಗ್ರಿಗಳು ಅಂದರೆ ೧೦ ಎಂ.ವಿ ಎ. ಟ್ರಾನ್ಸ್‌ಫಾರ್ಮರ್

ಆಸೊಲೇಟರ್ಸ್ ಇತ್ಯಾದಿಗಳು ಖರೀದಿಗೆ ಕ್ರಮ ಕೈಗೊಳ್ಳಲಾಗಿದೆ. ೧೧೦ ಕೆ.ವಿ. ಬ್ರೇಕರ್‌ಗಳನ್ನು ಈಗಾಗಲೇ ಒದಗಿಸಲಾಗಿದೆ. ಈ ಕೆಲಸವನ್ನು ೧೯೯೦-೯೧ನೇ ಸಾಲಿನಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

೮. ಶಿರಹಟ್ಟಿ ತಾಲ್ಲೂಕಿನ ಶಿಗ್ಲಿಗ್ರಾಮದಲ್ಲಿ ಇಂದಿರಾ ಆವಾಸ್ ಮನೆಗಳನ್ನು ಅನರ್ಹ ಪಟ್ಟ ಭದ್ರ ಹಿತಾಸಕ್ತಿಗಳಿಗೆ ಮಂಜೂರು ಮಾಡಿರುವುದು

ಶ್ರೀ ಎಸ್. ಎನ್. ಪಾಟೀಲ್. —ಶಿರಹಟ್ಟಿ ತಾಲ್ಲೂಕಿನ ಶಿಗ್ಲಿ ಗ್ರಾಮದಲ್ಲಿ ಪರಿಶಿಷ್ಟ ವರ್ಗದ ಜನರಿಗಾಗಿ ಗ್ರೂಪ್ ಹೌಸ್ ಯೋಜನೆಯಡಿಯಲ್ಲಿ ಇಂದಿರಾ ಆವಾಸ್ ಮನೆಗಳನ್ನು ಕಟ್ಟಿಸಿದ್ದು ಅವುಗಳನ್ನು ನಿಜವಾಗಿ ಕೊಡಬೇಕಾದಂತಹ ಫಲಾನುಭವಿಗಳಿಗೆ ಕೊಡದೇ ಪಟ್ಟಭದ್ರ ಹಿತಾಸಕ್ತಿಗಳ ಹಿಂಬಾಲಕರಿಗೆ ಪ್ರಾಮುಖ್ಯವಾಗಿ ಪರಿಶಿಷ್ಟ ಜಾತಿಯಲ್ಲದವರಿಗೆ ಮಂಜೂರು ಮಾಡಿರುವುದು. ಹೀಗೆ ಮಾಡುವಾಗ ಅಕ್ರಮ ಸಂಪಾದನೆ ಆಗಿದೆ ಎಂದು ಸಾರ್ವಜನಿಕವಾಗಿ ಕೇಳಿಬರುತ್ತಿದೆ. ಈ ವಿಷಯವನ್ನು ಧಾರವಾಡ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರು ಅಮೂಲಾಗ್ರವಾಗಿ ವಿಂಡಿದ್ದರೂ ಪರಿಶಿಷ್ಟ ವರ್ಗದ ಜನರಿಗಾದ ಅನ್ಯಾಯವನ್ನು ಸರಿಪಡಿಸಲು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಸದರಿ ಅನ್ಯಾಯವನ್ನು ಸರಿಪಡಿಸಿ ನಿಜವಾದ ಪರಿಶಿಷ್ಟ ವರ್ಗದ ಜನರಿಗೆ ಸದರಿ ಮನೆಗಳನ್ನು ಹಂಚಿಕೆ ಮಾಡಲು ಕೋರಿ ಆ ಜನರಿಂದ ೧೫ ದಿನ ಸತ್ಯಾಗ್ರಹ ನಡೆಸಿದ್ದು ಉಂಟು. ಈ ಬಗ್ಗೆ ಕಾನೂನು ಪ್ರಕಾರ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವುದಲ್ಲದೆ ನಿಜವಾದ ಪರಿಶಿಷ್ಟ ವರ್ಗದ ಜನರಿಗೆ ಸದರಿ ಮನೆಗಳನ್ನು ಹಂಚಲು ಕ್ರಮ ತೆಗೆದುಕೊಳ್ಳಲು ಕೋರಿದ್ದೇನೆ. ಮತ್ತು ಮನೆ ಹಂಚಲ್ಪಟ್ಟ ಪರಿಶಿಷ್ಟ ವರ್ಗವಲ್ಲದ ಜನರ ವಿವರವನ್ನು ಪ್ರಕಟಿಸಲು ಕೋರಿದ್ದೇನೆ.

ದಿನಾಂಕ ೧೭-೩-೧೯೯೦ರಂದು ಸಾಮಾಜಿಕ ನ್ಯಾಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿದಾಗ, ಕೆಲವು ಮನೆಗಳು ಪರಿಶಿಷ್ಟ ಜನರಿಗೆ ಸೇರಿದವುಗಳೆಂಬಂತೆ ಮಂಡಲ ಪಂಚಾಯಿತಿಯವರು ನಾಮಫಲಕಗಳನ್ನು ಹಾಕಿಸಿ, ಅವರು ಗ್ರಾಮ ಬಿಟ್ಟಕೂಡಲೇ ಆ ಫಲಕಗಳನ್ನು ತೆಗೆಸಿ ಮೊದಲಿದ್ದವರೇ ವಾಸವಾಗಿದ್ದಾರೆ. ಈ ಬಗ್ಗೆ ನಿಜಾಂಶ ತಿಳಿಯಲು ಸಿ. ಒ. ಡಿ. ತನಿಖೆಗೆ ಆಜ್ಞೆ ಮಾಡಲು ಕೋರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಹಾಗು ಪಂಚಾಯತ್ ರಾಜ್ ಸಚಿವರು).— ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಧಾರವಾಡ ಜಿಲ್ಲಾ ಶಿರಹಟ್ಟಿ ತಾಲ್ಲೂಕಿನಲ್ಲಿ ಶಿಗ್ಲಿ ಗ್ರಾಮದಲ್ಲಿ ಪರಿಶಿಷ್ಟ ವರ್ಗದ ಜನರಿಗಾಗಿ ಗ್ರೂಪ್ ಹೌಸ್ ಯೋಜನೆಯಡಿಯಲ್ಲಿ ಇಂದಿರಾ ಆವಾಸ್ ಮನೆಗಳನ್ನು ಕಟ್ಟಿಸಿದ್ದು ಅವುಗಳನ್ನು ನಿಜವಾಗಿ ಕೊಡಬೇಕಾದಂತಹ ಫಲಾನುಭವಿಗಳಿಗೆ ಕೊಡದೇ ಪರಿಶಿಷ್ಟ ಜಾತಿಯಲ್ಲದವರಿಗೆ ಮಂಜೂರು ಮಾಡಿರುವುದರ ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆದಿರುತ್ತಾರೆ. ಧಾರವಾಡ ಜಿಲ್ಲಾ ಪರಿಷತ್ತಿಗೆ ನಾನು ಭೇಟಿ ನೀಡಿ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನೆ ಮಾಡುವ ಸಮಯದಲ್ಲಿ ಸದರಿ ವಿಷಯವನ್ನು ನನ್ನ ಗಮನಕ್ಕೆ ಬಂದಿರುತ್ತದೆ. ಇಂದಿರಾ ಆವಾಸ್ ಮನೆಗಳನ್ನು ಹಂಚಿಕೆ ಮಾಡಿರುವ ವಿಷಯದಲ್ಲಿ ಉಂಟಾಗಿರುವ ದೋಷವನ್ನು ಸರಿಪಡಿಸಿ ಪರಿಶಿಷ್ಟ ಜಾತಿಗೆ ಸೇರಿದ ಅರ್ಹ ಫಲಾನುಭವಿಗಳಿಗೆ, ಮನೆಗಳನ್ನು ಹಂಚುವಂತೆ ಧಾರವಾಡ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳು ಸಿಬ್ಬಂದಿ ಸಮೇತ ಹೋಗಿ ಪೋಲೀಸ್ ನೆರವಿನೊಂದಿಗೆ ಕ್ರಮ ತೆಗೆದುಕೊಳ್ಳುವಂತೆ ಆದೇಶವಿತ್ತಿರುತ್ತೇನೆ.

ಶಾಸನಾ ರಚನಾ ಕಲಾಪಗಳು

೧೯೯೦ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರ ಪರವಾಗಿ ನಾನು "೧೯೯೦ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ತಿದ್ದುಪಡಿ) ವಿಧೇಯಕವನ್ನು ಸಭೆ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ"